ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 26, 2020

ಸಂಪುಟ : 47 ಸಂಚಿಕೆ : 206 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com








## ಅನಧಿಕೃತ ಬಯೋ ಫರ್ಟಿಲೈಜರ್ಸ್ ದಾಸ್ತಾನುದಾರನಿಗೆ ನೋಟಿಸ್

**ಹೊನ್ನಾಳಿ**

ಹೊನ್ನಾಳಿ, ನ.25- ಕೂಲಂಬಿ ಗ್ರಾಮದ ಕಿರಾಣಿ ಮಳಿಗೆಯೊಂದರಲ್ಲಿ ಅನಧಿಕೃತವಾಗಿ ಬಯೋ ಫರ್ಟಿಲೈಜರ್ಸ್ ದಾಸ್ತಾನು ಮಾಡಿದ್ದು, ಕೃಷಿ ಇಲಾಖೆ ನೋಟೀಸ್ ಜಾರಿ ಮಾಡಿದೆ. ರಸಗೊಬ್ಬರ ದಾಸ್ತಾನು ಅಥವಾ ಮಾರಾಟ ಮಾಡಲು ಕೃಷಿ ಇಲಾಖೆಯಿಂದ ರಸಗೊಬ್ಬರ ಪರವಾನಿಗೆ ಪಡೆದಿರುವುದಿಲ್ಲ. ಅಲ್ಲದೇ ಈ ಕುರಿತಂತೆ ಯಾವುದೇ ಇನ್ವಾಯಿಸ್, ರಸೀದಿ ಬಿಲ್ಲುಗಳ ದಾಖಲೆಗಳೂ ಇರುವುದಿಲ್ಲ. ನಿಮ್ಮ ಮೇಲೆ ಕಾನೂನಿನ್ವಯ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂಬುದಕ್ಕೆ ನವೆಂಬರ್ 30 ರೊಳಗಾಗಿ ಸಮಜಾಯಿಷಿ ನೀಡುವಂತೆ ನೋಟಿಸ್ ಕಳುಹಿಸಿದೆ.

ಅನಧಿಕೃತ ಬಯೋ ಫರ್ಟಿಲೈಜರ್ಸ್ ಪೂರೈಕೆ ಮಾಡಿದವರ ಹೆಸರು, ವಿಳಾಸ , ಇನ್ವಾಯಿಸ್ ವಿವರ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ನಿಮ್ಮ ವಿರುದ್ಧವೇ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಮಾಲೀಕ ಪ್ರವೀಣ್ ಅವರಿಗೆ ನೀಡಲಾದ ನೋಟಿಸ್‌ನಲ್ಲಿ ತಿಳಿಸಲಾಗಿದೆ ಎಂದು ಹೊನ್ನಾಳಿ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಲಯನ್ಸ್ ನಿಂದ ಡಾ. ಎಂ.ಜಿ. ಈಶ್ವರಪ್ಪ ಅವರಿಗೆ ಸನ್ಮಾನ

ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಕರ್ನಾಟಕ ರಾಜ್ಯೋತ್ಸವ, ಲಯನ್ಸ್ ಪ್ರಾಂತಿಯ ಅಧ್ಯಕ್ಷರ ಅಧಿಕೃತ ಭೇಟಿ ಕಾರ್ಯಕ್ರಮವು ಬಾಪೂಜಿ ಎಂಬಿಎ ಕಾಲೇಜಿನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ.


ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಡಾ. ಎಂ.ಜಿ. ಈಶ್ವರಪ್ಪ, ಜಿಲ್ಲಾ ರಾಜ್ಯೋತ್ಸವದ ಗೌರವಕ್ಕೆ ಪಾತ್ರರಾಗಿರುವ ಎ.ಆರ್. ಉಜ್ಜನಪ್ಪ, ವಾಸುದೇವ ರಾಯ್ಕರ್ ಅವರನ್ನು ಸನ್ಮಾನಿಸಲಾಗುತ್ತದೆ.

ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಹಿರಿಯ ವೈದ್ಯ ಡಾ. ಬಿ.ಎಸ್. ನಾಗಪ್ರಕಾಶ್, ಲಯನ್ಸ್ ಪ್ರಾಂತೀಯ ಅಧ್ಯಕ್ಷ ಎನ್.ವಿ.ಹರೀಶ್, ಲಯನ್ಸ್ ಕ್ಲಬ್ ದಾವಣಗೆರೆ ನೇಸರ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿ ವೈ.ಬಿ. ಸತೀಶ್ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಎಂ. ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನಗರದಲ್ಲಿಂದು ದೇವಲ ಮಹರ್ಷಿ ಜಯಂತಿ

ಶ್ರೀ ದೇವಲ ಮಹರ್ಷಿ ಜಯಂತಿ ಅಂಗವಾಗಿ ಶ್ರೀ ಬನಶಂಕರಿ ದೇವಿ ಹಾಗೂ ಶ್ರೀ ದೇವಲ ಮಹರ್ಷಿ ಭಾವಚಿತ್ರಕ್ಕೆ ವಿಶೇಷ ಅಭಿಷೇಕ, ಅಲಂಕಾರ, ಮಹಾಪೂಜೆ ನಂತರ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಬನಶಂಕರಿ ದೇವಿ ದೇವಾಂಗ ಸಮಾಜ ಸಂಘದ ಪ್ರಕಟಣೆ ತಿಳಿಸಿದೆ.

### ಇಟ್ಟಿಗಿ ರುದ್ರಪ್ಪ ನಿಧನ



ಹರಪನಹಳ್ಳಿ ಪಟ್ಟಣದ ಕೆ.ಎಚ್.ಬಿ. ಕಾಲೋನಿ ವಾಸಿ, ಬಿಜೆಪಿ ಮುಖಂಡ ಇಟ್ಟಿಗಿ ರುದ್ರಪ್ಪ ಅವರು ದಿನಾಂಕ 24.11.2020 ರ ಬುಧವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಸಹೋದರರು ಸಹೋದರಿಯರು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಸಂಜೆ 5.30ಕ್ಕೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

### ಐಗೂರು ಸುಶೀಲಮ್ಮ ನಿಧನ



ದಾವಣಗೆರೆ ವಿನೋಬ ನಗರ 4ನೇ ಮೇನ್, 6ನೇ ಕ್ರಾಸ್ ವಾಸಿ, ದಿ.ಕೆ.ಎಲ್. ಶಿವರುದ್ರಪ್ಪ ಇವರ ಧರ್ಮಪತ್ನಿ ಐಗೂರು ಸುಶೀಲಮ್ಮ (65) ಅವರು ದಿನಾಂಕ : 25.11.2020 ರಂದು ಬುಧವಾರ ರಾತ್ರಿ 9.30ಕ್ಕೆ ನಿಧನರಾಗಿದ್ದಾರೆ. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 26.11.2020 ರಂದು ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬೇಗ್ 3 ದಿನ ಸಿಬಿಐ ಕಸ್ಟಡಿಗೆ

ಬೆಂಗಳೂರು, ನ. 25 – ಐ.ಎಂ.ಎ. ಹಗರಣದಲ್ಲಿ ಬಂಧಿತ ಮಾಜಿ ಸಚಿವ ಆರ್. ರೋಶನ್ ಬೇಗ್ ಅವರನ್ನು ವಿಶೇಷ ನ್ಯಾಯಾಲಯ ಮೂರು ದಿನಗಳ ಸಿಬಿಐ ಕಸ್ಟಡಿಗೆ ವಹಿಸಿದೆ. ಡಿಸೆಂಬರ್ 28ರವರೆಗೆ ಕಸ್ಟಡಿ ನೀಡಲಾಗಿದ್ದು, ಹಗರಣದಲ್ಲಿ ಬೇಗ್ ಹೊಂದಿರುವ ಪಾತ್ರದ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುವುದು ಎಂದು ಸಿಬಿಐ ಮೂಲಗಳು ತಿಳಿಸಿವೆ.

## 2 ಕೋಟಿ ಖಾತ್ರಿ ದಿನ, 1,300 ಕೋಟಿ ರೂ.ಗಳಿಗಾಗಿ ಕೇಂದ್ರಕ್ಕೆ ಮನವಿ

**ಪ್ರವಾಹ ಪೀಡಿತ ತಾಲ್ಲೂಕುಗಳಿಗೆ ನೆರವು ಹಿನ್ನೆಲೆ**

ನವದೆಹಲಿ, ನ. 25 – ಪ್ರವಾಹ ಪೀಡಿತ 173 ತಾಲ್ಲೂಕುಗಳ ಕುಟುಂಬಗಳಿಗೆ ಉದ್ಯೋಗ ಖಾತ್ರಿ ಯೋಜನೆಯಡಿ ಕನಿಷ್ಠ 150 ಹೆಚ್ಚಿನ ಉದ್ಯೋಗ ದಿನಗಳನ್ನು ಕಲ್ಪಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮನವಿ ಮಾಡಿಕೊಂಡಿದ್ದಾರೆ.

ಎರಡು ಕೋಟಿ ಹೆಚ್ಚುವರಿ ಮಾನವ ದಿನಗಳ ಸೃಜನೆಯ ಜೊತೆಗೆ ಕೇಂದ್ರದಿಂದ 1,300 ಕೋಟಿ ರೂ.ಗಳ ಹೆಚ್ಚುವರಿ ಅನುದಾನ ನೀಡಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ನರೇಂದ್ರ ಸಿಂಗ್ ತೋಮರ್ ಭೇಟಿ ಮಾಡಿದ ನಂತರ ಹೇಳಿಕೆ ನೀಡಿರುವ ಈಶ್ವರಪ್ಪ, ರಾಜ್ಯದ ಬೇಡಿಕೆಗೆ ತೋಮರ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಡಿ 1,300 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಹಾಗೂ ಪ್ರವಾಹ ಪೀಡಿತ ತಾಲ್ಲೂಕುಗಳಿಗೆ ಹೆಚ್ಚುವರಿ ಮಾನವ ದಿನಗಳನ್ನು ಕಲ್ಪಿಸಲು ಅವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ರಾಜ್ಯಕ್ಕೆ 13 ಕೋಟಿ ಮಾನವ ದಿನಗಳನ್ನು ಸೃಷ್ಟಿಸುವ ಗುರಿ ನೀಡಲಾಗಿತ್ತು. ಇದರಲ್ಲಿ 10.50 ಕೋಟಿ ಮಾನವ ದಿನಗಳ ಗುರಿಯನ್ನು ಈಗಾಗಲೇ ತಲುಪಲಾಗಿದೆ ಎಂದು ಈಶ್ವರಪ್ಪ ಹೇಳಿದ್ದಾರೆ. ಇದರ ಜೊತೆಗೆ, ಉದ್ಯೋಗ ಖಾತ್ರಿ ಯೋಜನೆಯಡಿ ಬಾಕಿ ಇರುವ 1,119 ಕೋಟಿ ರೂ.ಗಳ ಸಾಮಗ್ರಿ ಬಾಕಿಯನ್ನು ತ್ವರಿತವಾಗಿ ಬಿಡುಗಡೆ ಮಾಡುವಂತೆಯೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

## ನಗರದಲ್ಲಿ ನಾಳೆ ಶ್ರೀ ನಿಮಿಷಾಂಬ ದೇವಿ ಪ್ರತಿಷ್ಠಾಪನಾ ಮಹೋತ್ಸವ



ದಾವಣಗೆರೆ, ನ.25- ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ವತಿಯಿಂದ ನಾಡಿದ್ದು ದಿನಾಂಕ 27ರ ಶುಕ್ರವಾರ ಶ್ರೀ ನಿಮಿಷಾಂಬ ದೇವಿಯ 62ನೇ ಪ್ರತಿಷ್ಠಾಪನಾ ಮಹೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗಿನ ಜಾವ ದೇವಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ ನಂತರ ಬೆಳಿಗ್ಗೆ 7.30 ರಿಂದ 8 ಗಂಟೆಗೆ ಗಂಗಾ ಪೂಜೆ ನಂತರ ಗಣಪತಿ ಪೂಜೆ, ಗಣಹೋಮ, ನವಗ್ರಹ ಹೋಮ, ಶ್ರೀ ನಿಮಿಷಾಂಬದೇವಿ ಕಲಾಹೋಮ, ಬಲಿಹರಣ, ಪೂರ್ಣಾಹುತಿ, ಶ್ರೀ ನಿಮಿಷಾಂಬ ದೇವಿ ಪಲ್ಲಕ್ಕಿ ಉತ್ಸವ ನಡೆಯಲಿದೆ.

## ನಗರದಲ್ಲಿ ಇಂದು ರಕ್ತದಾನ ಶಿಬಿರ

ಜಿಲ್ಲಾ ಎಸ್.ಎ. ರವೀಂದ್ರನಾಥ್ ಅಭಿಮಾನಿಗಳ ಬಳಗದ ಆಶ್ರಯದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಅವರ ಹುಟ್ಟುಹಬ್ಬದ ಪ್ರಯುಕ್ತ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ರಕ್ತ ನಿಧಿಯಲ್ಲಿ ರಕ್ತದಾನ ಶಿಬಿರ ನಡೆಯಲಿದೆ.

ಇಂದು ಮಧ್ಯಾಹ್ನ 12.30 ಕ್ಕೆ ಪುಟ್ಟರಾಜ ಗವಾಯಿಗಳ ವೀರಶೈವ ಪುಣ್ಯಾಶ್ರಮದಲ್ಲಿ ಅಂಧ ಮಕ್ಕಳಿಗೆ ಭೋಜನ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗೆ ಉಚಿತ ಮಾಸ್ಕ್ ವಿತರಿಸಲಾಗುವುದು ಎಂದು ವ್ಯವಸ್ಥಾಪಕರುಗಳಾದ ನಿಟ್ಟುವಳ್ಳಿ ಮುರುಗೇಶ್, ಎಂ.ಆರ್. ಶೇಖರ್, ಡಿ.ಆರ್. ಶಿವರುದ್ರಪ್ಪ, ಜಲ್ಲಿ ನಾಗರಾಜ್, ಹುಲಿಕಟ್ಟೆ ರಾಜೇಶ್, ಡಿಶ್ ನಾಗರಾಜ್ ಅವರುಗಳು ತಿಳಿಸಿದ್ದಾರೆ.

## ಹರಿಹರ ತಾ.ಗೆ ಇಂದು ಎಸಿಬಿ ಭೇಟಿ

ದಾವಣಗೆರೆ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಹರಿಹರ ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು-ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ದೂರವಾಣಿ : 08192-236600, 9480806284 ನ್ನು ಸಂಪರ್ಕಿಸಬಹುದೆಂದು ಎಸಿಬಿ ಡಿವೈಎಸ್‌ಪಿ (ಪ್ರಭಾರ) ತಿಳಿಸಿದ್ದಾರೆ.

## ಕಸಾಪದಿಂದ ಇಂದು ನುಡಿ ಹಬ್ಬ


ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಜನಪದರ ಹಾಸ್ಯ ಪ್ರವೃತ್ತಿ' ವಿಷಯ ಕುರಿತಂತೆ ದಾವಣಗೆರೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ.ಹೆಚ್. ವಿಶ್ವನಾಥ್ ಉಪನ್ಯಾಸ ನೀಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ನಗರದಲ್ಲಿ ಇಂದು ವೀರಶೈವ ಮಹಿಳಾ ಘಟಕದ ಉದ್ಘಾಟನೆ


ಅಖಿಲ ಭಾರತ ವೀರಶೈವ ಮಹಿಳಾ ಘಟಕ ಉದ್ಘಾಟನಾ ಸಮಾರಂಭವನ್ನು ಇಂದು ಬೆಳಿಗ್ಗೆ 11 ಕ್ಕೆ ಶ್ರೀಶೈಲ ಮಠದಲ್ಲಿ ಆಯೋಜಿಸಲಾಗಿದೆ. ಸಾನ್ನಿಧ್ಯ : ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ. ಉದ್ಘಾಟನೆ : ಡಾ. ಶಾಮನೂರು ಶಿವಶಂಕರಪ್ಪ. ಮುಖ್ಯ ಅತಿಥಿಗಳು : ದೇವರಮನೆ ಶಿವಕುಮಾರ್, ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಮಹಾಂತೇಶ ಬೀಳಗಿ, ಹನುಮಂತರಾಯ, ಬಿ.ಜಿ. ಅಜಯಕುಮಾರ್, ದೀಪಾ ಜಗದೀಶ್, ವಿನುತಾ ರವಿ, ಉಮಾ ರಮೇಶ್. ಎಸ್.ಟಿ. ವೀರೇಶ್, ಗೌರಮ್ಮ ಗಿರೀಶ್, ಶಾಂತಕುಮಾರ್ ಆರ್. ಸೋಗಿ, ಕೆ.ಎಂ. ವೀರೇಶ್, ವೀಣಾ ನಂಜಣ್ಣ.

## ಎಲೆಬೇತೂರಿನಲ್ಲಿ ಇಂದು ಕ್ಷೇತ್ರೋತ್ಸವ



ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ತೊಗರಿ ಬೆಳೆ ಕ್ಷೇತ್ರೋತ್ಸವವನ್ನು ಎಲೆಬೇತೂರು ಗ್ರಾಮದಲ್ಲಿ ಇಂದು ಕೃಷಿ ಇಲಾಖೆಯಿಂದ ಪುಟಗನಾಳು ರಸ್ತೆಯಲ್ಲಿರುವ ಪುಟಗನಾಳು ಲೋಕೇಶ್ ಅವರ ಹೊಲದಲ್ಲಿ ಹಮ್ಮಿಕೊಳ್ಳಲಾಗಿದೆ. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಡಾ|| ರೇವಣಸಿದ್ಧನ ಗೌಡ್ರು, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಮತಿ ರೇಣುಕಾ ಕರಿಬಸಪ್ಪ, ತಾಲ್ಲೂಕು ಪಂಚಾಯಿತಿ ಸದಸ್ಯ ಬಿ.ಜಿ. ಸಂಗನಗೌಡ್ರು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ತಾಂಡಾ ನಿಗಮದ ನಿರ್ದೇಶಕರಾಗಿ ಎಸ್.ಪಿ. ಲಿಂಬ್ಯಾನಾಯ್ಕ್




ಹರಪನಹಳ್ಳಿ, ನ.25- ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕರನ್ನಾಗಿ ಎಸ್.ಪಿ. ಲಿಂಬ್ಯಾನಾಯ್ಕ ಅವರನ್ನು ಶಾಸಕ ಜಿ.ಕರುಣಾಕರ ರೆಡ್ಡಿ ಶಿಫಾರಸ್ಸಿನ ಮೇರೆಗೆ ನೇಮಕ ಮಾಡಲಾಗಿದೆ. ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಕಾರ್ಯದರ್ಶಿ ಉದಯ ಕುಮಾರ್, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷ ಎಲ್. ಮಂಜ್ಯಾನಾಯ್ಕ, ಮುಖಂಡರಾದ ರಂಗಾಪುರ ಬಸವರಾಜ್, ಭಿನ್ಯಾನಾಯ್ಕ, ಬಿ.ವೈ. ವೆಂಕಟೇಶ್ ನಾಯ್ಕ, ಆರ್. ಕರಿಗೌಡ್ರು, ಶಿವಾನಂದ, ಆನಂದ್ ರಾವ್, ಗಂಗಾನಾಯ್ಕ್, ಸಿ.ಸಿ. ರಾಮಚಂದ್ರ, ಪೂರ್ಯಾನಾಯ್ಕ, ಕೊಟ್ರೇಶ್ ನಾಯ್ಕ, ಜಗ್ಯನಾಯ್ಕ, ಹಾಲೇಶಪ್ಪ, ಮನ್ಮಥ ಹಾಗೂ ಇನ್ನಿತರರಿದ್ದರು.

## ಕಾಂಗ್ರೆಸ್ ಹಿರಿಯ ನಾಯಕ ಅಹಮದ್ ಪಟೇಲ್ ನಿಧನ



ನವದೆಹಲಿ, ನ. 25 – ಕಾಂಗ್ರೆಸ್ ಹಿರಿಯ ನಾಯಕ ಹಾಗೂ ರಾಜಕೀಯ ತಂತ್ರಗಾರಿಕಾ ಪರಿಣಿತ ಅಹಮದ್ ಪಟೇಲ್ ಬುಧವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಅಸ್ವಸ್ಥರಾಗಿದ್ದ 71 ವರ್ಷದ ಪಟೇಲ್ ಅವರನ್ನು ಗುರ್ಗಾಂವ್‌ನ ಮೆದಾಂತ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಕೊರೊನಾ ವೈರಸ್ ಸೋಂಕು ಕಂಡುಬಂದ ನಂತರ ಆರೋಗ್ಯ ಸಂಕೀರ್ಣತೆ ಉಂಟಾಗಿತ್ತು.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಆಪ್ತರಲ್ಲಿ ಒಬ್ಬರಾಗಿದ್ದ ಪಟೇಲ್, ಸೋನಿಯಾರ ರಾಜಕೀಯ ಸಲಹೆಗಾರರೂ ಆಗಿದ್ದರು. ಪಕ್ಷ ಹಲವಾರು ಬಾರಿ ಸಂಕಷ್ಟಕ್ಕೆ ಸಿಲುಕಿದ್ದಾಗ ಅವರ ಚಾಣಾಕ್ಷತನ ನೆರವಾಗಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಪಟೇಲ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಪಟೇಲ್ ಅವರ ಅಂತ್ಯಕ್ರಿಯೆಯನ್ನು ಗುಜರಾತ್ ಭರೂಚ್ ಜಿಲ್ಲೆಯಲ್ಲಿರುವ ತವರು ಗ್ರಾಮವಾದ ಪಿರಮನ್‌ನಲ್ಲಿ ನೆರವೇರಿಸಲಾಗುವುದು.

ಪಿರಮನ್‌ನಲ್ಲಿರುವ ತಮ್ಮ ತಂದೆ -ತಾಯಿಗಳ ಸಮಾಧಿಯ ಪಕ್ಕದಲ್ಲೇ ತಮ್ಮ ಅಂತ್ಯಕ್ರಿಯೆ ನೆರವೇರಿಸಬೇಕೆಂದು ಪಟೇಲ್ ತಿಳಿಸಿದ್ದರು.


## ಹರಿಹರದಲ್ಲಿ ಇಂದು ಶ್ರೀ ಲಕ್ಷ್ಮೀ ಹಯಗ್ರೀವ ಯಾಗ

ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನಜಿಯ್ಯರ್ ಸ್ವಾಮಿಗಳಿಂದ ತುಂಗಭದ್ರಾ ಪುಷ್ಕರ ಲೋಕ ಕಲ್ಯಾಣಾರ್ಥ ಕೋವಿಡ್ 19 (ಕೊರೊನಾ ಸೋಂಕು) ಸಂಪೂರ್ಣ ನಿವಾರಣೆಗಾಗಿ ಹರಿಹರದ ತುಂಗಭದ್ರಾ ನದಿ ದಡದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಹಮ್ಮಿಕೊಂಡಿರುವ ಬ್ರಹ್ಮಯಜ್ಞ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಗೋ ಪೂಜೆ, ಅರ್ಚನೆ, ಸೇವಾಕಾಲ, ವೇದ ಪಾರಾಯಣ ನಡೆಯುವುದು. ನಂತರ 9 ಗಂಟೆಗೆ ಜ್ಞಾನ ಸಿದ್ದಿಗಾಗಿ ಶ್ರೀ ಲಕ್ಷ್ಮಿ ಹಯಗ್ರೀವ ಯಾಗ ನಡೆಯಲಿದೆ.





ಜನ್ಮದಿನದ ಶುಭಾಶಯಗಳು
75 Years BIRTHDAY
ಇಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ
ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ, ಸರಳ ಸಜ್ಜನಿಕೆಯ
ಸಹೃದಯಿ ರಾಜಕಾರಣಿಗಳೂ, ಹೋರಾಟಗಾರರೂ,
ಹಾಗೂ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ 75ನೇ ವರ್ಷದ ಜನ್ಮದಿನದ ಹಾರ್ದಿಕ ಶುಭಾಶಯಗಳು.
ರಾಜನಹಳ್ಳಿ ಶಿವಕುಮಾರ್
ಅಧ್ಯಕ್ಷರು, ದಾವಣಗೆರೆ-ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.


ಜನ್ಮದಿನದ ಹಾರ್ದಿಕ ಶುಭಾಶಯಗಳು
ಇಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ
ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ,
ಸರಳ ಸಜ್ಜನಿಕೆಯ ಸಹೃದಯಿ ರಾಜಕಾರಣಿಗಳೂ, ಹೋರಾಟಗಾರರೂ,
ನಮ್ಮ ನೆಚ್ಚಿನ ನಾಯಕರೂ, ಮಾರ್ಗದರ್ಶಕರೂ ಹಾಗೂ
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ 75ನೇ ವರ್ಷದ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು ಆಯುಷ್ಯ, ಆರೋಗ್ಯ ಭಾಗ್ಯ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.
ಶಿವಾನಂದ
ಎಸ್.ಸಿ. ಮೋರ್ಚಾ
ಜಿಲ್ಲಾ ಕಾರ್ಯದರ್ಶಿ
ಮಂಜುನಾಥ ಡಿ.ಜಿ.
ಎಸ್.ಟಿ. ಮೋರ್ಚಾ
ಜಿಲ್ಲಾ ಮಾಜಿ ಜಿಲ್ಲಾಧ್ಯಕ್ಷರು
ಶ್ರೀನಿವಾಸ ರಟ್ಟಿಹಳ್ಳಿ
ಎಕ್ಸಿಕ್ಯೂಟಿವ್ ಮೆಂಬರ್
ಎಸ್.ಸಿ. ಮೋರ್ಚಾ
ಕೃಷ್ಣಮೂರ್ತಿ ಮಲ್ಲಾಪುರ
ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ
ಎಸ್.ಟಿ. ಮೋರ್ಚಾ

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 26, 2020


## ಪಾಲಿಕೆ ಖರ್ಚಿಲ್ಲದೇ ನಗರದಾದ್ಯಂತ ಎಲ್‌ಇಡಿ ದೀಪಗಳ ಅಳವಡಿಕೆ



### ಖಾಸಗಿ ಸಹಭಾಗಿತ್ವದಲ್ಲಿ ಎಂಟು ತಿಂಗಳಲ್ಲಿ ಯೋಜನೆ ಜಾರಿ : ಮೇಯರ್ ಅಜಯ್

ದಾವಣಗೆರೆ, ನ. 25 - ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಪಾಲಿಕೆಯಿಂದ ಹಣ ವೆಚ್ಚ ಮಾಡದೇ ನಗರದೆಲ್ಲೆಡೆ ಎಲ್.ಇ.ಡಿ. ದೀಪಗಳನ್ನು ಅಳವಡಿಕೆ ಮಾಡಲಾಗುವುದು ಎಂದು ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ತಿಳಿಸಿದ್ದಾರೆ.

ಪಾಲಿಕೆ ವತಿಯಿಂದ ಗಾಂಧಿನಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ ಮನೆ ಬಾಗಿಲಿಗೆ ಮಹಾನಗರ ಪಾಲಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಪ್ರಸಕ್ತ ಪಾಲಿಕೆ ಬೀದಿ ದೀಪಗಳ ವಿದ್ಯುತ್ ವೆಚ್ಚಕ್ಕಾಗಿ ತಿಂಗಳಿಗೆ 80 ಲಕ್ಷ ರೂ. ಪಾವತಿಸುತ್ತಿದೆ. ಎಲ್.ಇ.ಡಿ. ದೀಪಗಳನ್ನು ಅಳವಡಿಕೆ ಮಾಡಿದರೆ ವೆಚ್ಚ 30 ಲಕ್ಷ ರೂ.ಗಳಿಗೆ ಇಳಿಕೆಯಾಗಿ, ಪ್ರತಿ ತಿಂಗಳು 50 ಲಕ್ಷ ರೂ. ಉಳಿತಾಯವಾಗಲಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ, ಖಾಸಗಿಯವರಿಗೆ ಟೆಂಡರ್‌ನಲ್ಲಿ ಯಾವುದೇ ಹಣ ನೀಡದೇ ಎಲ್‌ಇಡಿ ಅಳವಡಿಕೆಯ ಕಾರ್ಯ ವಹಿಸಲಾಗುವುದು. ಎಲ್‌ಇಡಿ ಅಳವಡಿಕೆ ಮಾಡುವುದರಿಂದ ಉಳಿತಾಯವಾಗುವ ಹಣದಲ್ಲಿ 32 ಲಕ್ಷ ರೂ.ಗಳನ್ನು 84 ತಿಂಗಳ ಅವಧಿಗೆ ಖಾಸಗಿಯವರು ಪಡೆಯಲಿದ್ದಾರೆ ಎಂದು ಅಜಯ್‌ಕುಮಾರ್ ವಿವರಿಸಿದ್ದಾರೆ.

ಈ ಯೋಜನೆಯ ಅನ್ವಯ 45 ವಾರ್ಡ್‌ಗಳಲ್ಲಿರುವ 21 ಸಾವಿರ ಬೀದಿ ದೀಪಗಳನ್ನು ಮುಂದಿನ ಎಂಟು ತಿಂಗಳಲ್ಲಿ ಎಲ್‌ಇಡಿಗೆ ಪರಿವರ್ತನೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

ಪಾಲಿಕೆ ಮೇಯರ್ ಆಗಿ ಅಧಿಕಾರ ವಹಿಸಿಕೊಂಡ ನಂತರ 543 ಟೆಂಡರ್‌ಗಳನ್ನು ಕರೆಯಲಾಗಿತ್ತು. ಕೊರೊನಾದಿಂದಾಗಿ ಕಾಮಗಾರಿಗಳಿಗೆ ಹಿನ್ನಡೆಯಾಗಿದೆ. ಇದುವರೆಗೂ 62 ಕಾಮಗಾರಿಗಳು ಮುಗಿದ್ದು, 32 ಚಾಲನೆಯಲ್ಲಿವೆ. ಉಳಿದ 44 ಟೆಂಡರ್‌ಗಳ ಕಾಮಗಾರಿಗಳು 2-3 ತಿಂಗಳಲ್ಲೇ ಚಾಲನೆಗೊಳ್ಳಲಿವೆ ಎಂದವರು (7ನೇ ಪುಟಕ್ಕೆ)

## ಸ್ಥಳೀಯ ನಿರ್ಬಂಧ, ಮುನ್ನೆಚ್ಚರಿಕೆ

### ಡಿಸೆಂಬರ್ ತಿಂಗಳಿಗಾಗಿ ಕೇಂದ್ರದಿಂದ ಕೊರೊನಾ ಮಾರ್ಗಸೂಚಿ

ನವದೆಹಲಿ, ನ. 25 – ದೇಶದ ಕೆಲವು ಕಡೆಗಳಲ್ಲಿ ಕೊರೊನಾ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಗಳು ಪೂರ್ವಾನುಮತಿ ಪಡೆದು ಸೀಮಿತ ನಿರ್ಬಂಧಗಳನ್ನು ಹೇರಬಹುದು ಎಂದು ಕೇಂದ್ರ ಸರ್ಕಾರ ತನ್ನ ಡಿಸೆಂಬರ್ ತಿಂಗಳ ಕೊರೊನಾ ಮಾರ್ಗಸೂಚಿಯಲ್ಲಿ ತಿಳಿಸಿದೆ.

ದೇಶದಲ್ಲಿ ಕೊರೊನಾ ಸಕ್ರಿಯ ಪ್ರಕರಣಗಳಲ್ಲಿ ಸ್ಥಿರವಾದ ಇಳಿಕೆಯಾಗುತ್ತಿದೆ. ಈ ಸಂದರ್ಭದಲ್ಲಿ ಕೊರೊನಾ ಪ್ರಕರಣಗಳ ಮೇಲೆ ನಿಗಾ, ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಅಗತ್ಯವಾಗಿದೆ ಎಂದು ತಿಳಿಸಲಾಗಿದೆ.

ಕೆಲ ರಾಜ್ಯಗಳಲ್ಲಿ ಕೊರೊನಾ ಪ್ರಕರಣಗಳು ಏರಿಕೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಹಬ್ಬದ ದಿನಗಳು ಹಾಗೂ ಚಳಿ ತೀವ್ರವಾಗುತ್ತಿರುವ ಬಗ್ಗೆ ಎಚ್ಚರಿಕೆ ವಹಿಸಬೇಕು. ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಲಾಗಿದೆ.

ರಾಜ್ಯ ಸರ್ಕಾರಗಳು ಅಗತ್ಯವಿರುವ ಕಡೆಗಳಲ್ಲಿ ಸ್ಥಳೀಯವಾಗಿ ನಿರ್ಬಂಧಗಳನ್ನು ಹೇರಬಹುದು. ಆದರೆ, ಇದಕ್ಕಾಗಿ ಪೂರ್ವಾನುಮತಿ ಪಡೆಯಬೇಕಿದೆ. ಈ ಮಾರ್ಗಸೂಚಿ ಡಿಸೆಂಬರ್ 1ರಿಂದ ಡಿಸೆಂಬರ್ 31ರ ನಡುವೆ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

ಮಾರುಕಟ್ಟೆಗಳು, ಸಂತೆ ಹಾಗೂ ಸಾರ್ವಜನಿಕ ಸಾರಿಗೆ ಪ್ರದೇಶಗಳಲ್ಲಿ ದೈಹಿಕ ಅಂತರಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕ ಹಾಗೂ ಕೆಲಸದ ಸ್ಥಳಗ ಳಲ್ಲಿ ಮಾಸ್ಕ್ ಧರಿಸದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

### ಡಿ.1ರ ಒಳಗೆ ವೈದ್ಯಕೀಯ ಕಾಲೇಜು ಆರಂಭ

ನವದೆಹಲಿ, ನ. 25 – ಬರುವ ಡಿಸೆಂಬರ್ 1 ಇಲ್ಲವೇ ಅದಕ್ಕೆ ಮುಂಚೆ ರಾಜ್ಯ ಸರ್ಕಾರ ವೈದ್ಯಕೀಯ ಕಾಲೇಜುಗಳನ್ನು ತೆರೆಯಬೇಕೆಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.



ಕೊರೊನಾ ಹಿನ್ನೆಲೆಯಲ್ಲಿ ಮಾರ್ಚ್ ನಂತರದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಮುಚ್ಚಲಾಗಿದೆ.

ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆ ದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಕೊರೊನಾ ಮುನ್ನೆಚ್ಚರಿಕೆ ಯೊಂದಿಗೆ ಕಾಲೇಜುಗಳನ್ನು ತೆರೆಯುವಂತೆ ತಿಳಿಸಿದ್ದಾರೆ. ಇದೇ ವೇಳೆ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ತರಬೇತಿಗೆ ಸಾಕಷ್ಟು ಸಂಖ್ಯೆಯಲ್ಲಿ ಕೊರೊನೇತರ ಬೆಡ್‌ಗಳು ಲಭ್ಯವಾಗಿರುವಂತೆ ನೋಡಿಕೊಳ್ಳಬೇಕು ಎಂದೂ (7ನೇ ಪುಟಕ್ಕೆ)

## ಮನೆ ಬಾಗಿಲಿಗೆ ಪಾಲಿಕೆ ರಾಷ್ಟ್ರದಲ್ಲೇ ಮೊದಲು

### ಜನಸ್ನೇಹಿ ಯೋಜನೆಗೆ ಹಿನ್ನಡೆಯಾಗದಂತೆ ಜಾರಿಗೆ ತರಲು ಸಚಿವ ಭೈರತಿ ಕರೆ

ದಾವಣಗೆರೆ, ನ. 25 - ಇಡೀ ರಾಷ್ಟ್ರದಲ್ಲೇ ಮೊದಲ ಬಾರಿಗೆ ಜಾರಿಗೆ ತರುತ್ತಿರುವ ಮನೆ ಬಾಗಿಲಿಗೆ ಮಹಾನಗರಪಾಲಿಕೆ ಯೋಜನೆಯು ಜನಸ್ನೇಹಿ ಹಾಗೂ ಮಹತ್ವದ ಹೆಜ್ಜೆಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.



ಗಾಂಧಿನಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಪಾಲಿಕೆ ವತಿಯಿಂದ ಆಯೋಜಿಸಲಾಗಿದ್ದ ಮನೆ ಬಾಗಿಲಿಗೆ ಮಹಾನಗರಪಾಲಿಕೆ ಹಾಗೂ ಒಂದು ಲಕ್ಷ ಸಸಿ ನೆಡುವ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಪಾಲಿಕೆ ನೌಕರರು, ಅಧಿಕಾರಿ ವರ್ಗ ಹಾಗೂ ಸಿಬ್ಬಂದಿಗಳೆಲ್ಲರ ಮೇಲೂ ಈ ಯೋಜನೆ ಜಾರಿಯ ಜವಾಬ್ದಾರಿ ಇದೆ. ಪಾಲಿಕೆಯ ಸೌಲಭ್ಯಗಳು ಸಿಗದೇ ಹಿನ್ನಡೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಿದೆ ಎಂದವರು ಕಿವಿಮಾತು ಹೇಳಿದ್ದಾರೆ.

ನಗರದ ಪ್ರತಿ ವಾರ್ಡ್‌ಗೂ 2-3 ಕೋಟಿ ರೂ.ಗಳ ವಿಶೇಷ ಅನುದಾನ ನೀಡಬೇಕೆಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಳಿ ಮನವಿ ಮಾಡಿಕೊಳ್ಳಲಾಗಿದೆ. ಆರ್ಥಿಕ ಪರಿಸ್ಥಿತಿ ನೋಡಿ ತೀರ್ಮಾನಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಲಕ್ಷ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಪಾಲಿಕೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 125 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಸ್ಮಾರ್ಟ್ ಸಿಟಿ ಕಾಮಗಾರಿಗಳು ನಡೆಯುತ್ತಿವೆ. ಹೀಗಾಗಿ ಪಾಲಿಕೆಯ ಕೆಲಸಗಳು ಬಹಳಷ್ಟಿವೆ. ಕೊರೊನಾ ಹಿನ್ನಡೆಯಿಂದ ಹೊರ ಬಂದು ದಾವಣಗೆರೆ ನಂ. 1 ಆಗುವ ರೀತಿಯಲ್ಲಿ ಪಾಲಿಕೆ ಕೆಲಸ ಮಾಡಬೇಕು ಎಂದು ಹೇಳಿದರು.

ಮಳೆಗಾಲ ಇಲ್ಲದಿರುವ ಈ ಸಂದರ್ಭದಲ್ಲಿ ಲಕ್ಷ ಸಸಿಗಳನ್ನು ಯಾವ ರೀತಿ ಬೆಳೆಸುತ್ತಾರೆ ಎಂಬ ಪ್ರಶ್ನೆಗಳೂ ಇವೆ. ಹೀಗಾಗಿ ಆಯಾ ವಾರ್ಡ್‌ಗಳ ಸದಸ್ಯರು ತಮ್ಮಲ್ಲಿನ ಸಸಿಗಳನ್ನು ಬೆಳೆಸಲು ಕಾಳಜಿ ವಹಿಸಬೇಕು ಎಂದವರು ಕರೆ ನೀಡಿದರು.

ಜನನ - ಮರಣ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಎಸ್.ಎ. (7ನೇ ಪುಟಕ್ಕೆ)

### ಹಳೆ ಭಾಗದವರು ಪುಣ್ಯವಂತರು, ನಮ್ಮ ಕಡೆ ನಿಸ್ಸಹಾಯಕರು!

ನಗರದ ಹಳೆ ಭಾಗದ ಕಡೆ ಜನರೇ ಪುಣ್ಯವಂತರು. ನೀವು ಹೋರಾಟ ನಡೆಸಿ ಹೆಚ್ಚಿನ ಅನುದಾನ ಪಡೆದುಕೊಳ್ಳುತ್ತಿದ್ದೀರಿ. ಸ್ಮಾರ್ಟ್ ಸಿಟಿ ಯೋಜನೆಯೂ ಈ ಭಾಗದಲ್ಲಿ ಹೆಚ್ಚಾಗಿ ಜಾರಿಗೆ ಬರುತ್ತಿದೆ ಎಂದು ದಾವಣಗೆರೆ ಉತ್ತರ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದ್ದಾರೆ.

ನಮ್ಮ ಕಡೆ (ಹೊಸ ಭಾಗ) ಜನರು ನಿಸ್ಸಹಾಯಕರು. ನಾಲ್ಕು ಜನ ಜೊತೆಯಾಗಿ ಸೇರಲ್ಲ. ಹೋರಾಟ ನಡೆಸಲೂ ಹಿಂಜರಿಯುತ್ತಾರೆ ಎಂದವರು ತಿಳಿಸಿದರು. ನಾನು ನಿಮ್ಮ ಬಗ್ಗೆಯೇನೂ ಆಕ್ಷೇಪಿಸುತ್ತಿಲ್ಲ. ನೀವು (ಹಳೆ ಭಾಗದ) ಜನರು ಚೆನ್ನಾಗಿರಬೇಕು, ಯೋಜನೆಗಳ ಅನುಕೂಲ ಪಡೆಯಬೇಕು ಎಂದಷ್ಟೇ ನನ್ನ ಅಭಿಪ್ರಾಯ ಎಂದೂ ರವೀಂದ್ರನಾಥ್ ಸ್ಪಷ್ಟಪಡಿಸಿದರು.

## ಶುಲ್ಕ ಪಾವತಿಸದಿದ್ದರೆ ಆನ್‌ಲೈನ್ ತರಗತಿ ರದ್ದು

**ಸರ್ಕಾರದ ಎಚ್ಚರಿಕೆ ಲೆಕ್ಕಿಸದ ಖಾಸಗಿ ಶಾಲೆಗಳು**

ಬೆಂಗಳೂರು, ನ. 25 - ವಿದ್ಯಾರ್ಥಿಗಳು ಶುಲ್ಕ ಪಾವತಿಸದಿದ್ದರೆ ಅಂಥವರಿಗೆ ಆನ್‌ಲೈನ್ ತರಗತಿಗಳನ್ನು ರದ್ದು ಮಾಡಲಾಗುವುದೆಂದು ಖಾಸಗಿ ಶಾಲೆಗಳು ಸರ್ಕಾರಕ್ಕೆ ಸೆಡ್ಡು ಹೊಡೆದಿವೆ.

ಶುಲ್ಕ ಪಾವತಿಸದಿದ್ದರೆ, ಅಂತಹವರಿಗೆ ಆನ್‌ಲೈನ್ ತರಗತಿಗಳನ್ನು ರದ್ದು ಮಾಡಬಾರದೆಂಬ ಸರ್ಕಾರದ ಆದೇಶಕ್ಕೆ ಸೊಪ್ಪು ಹಾಕದ ಖಾಸಗಿ ಶಾಲೆಗಳ ಒಕ್ಕೂಟ, ನವೆಂಬರ್ ಅಂತ್ಯದೊಳಗೆ (7ನೇ ಪುಟಕ್ಕೆ)

## 'ಲಕ್ಷ್ಮಿ ವಿಲಾಸ್' ವಿಲೀನಕ್ಕೆ ಸಮ್ಮತಿ

### ಠೇವಣಿ ವಾಪಸ್ ಮೇಲಿದ್ದ ನಿರ್ಬಂಧ ತೆರವು

ನವದೆಹಲಿ, ನ. 25 – ಸಂಕಷ್ಟದಲ್ಲಿರುವ ಲಕ್ಷ್ಮಿ ವಿಲಾಸ್ ಬ್ಯಾಂಕ್ (ಎಲ್.ವಿ.ಬಿ.) ಅನ್ನು ಡಿಬಿಎಸ್ ಬ್ಯಾಂಕ್ ಇಂಡಿಯಾ (ಡಿ.ಬಿ.ಐ.ಎಲ್.)ನಲ್ಲಿ ವಿಲೀನ ಮಾಡುವ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಕೇಂದ್ರ ಸರ್ಕಾರ ಬ್ಯಾಂಕುಗಳ ವಿಲೀನಕ್ಕೆ ಒಪ್ಪಿಗೆ ನೀಡಿದೆ. ಇದೇ ವೇಳೆ ಎಲ್.ವಿ.ಬಿ. ಬ್ಯಾಂಕಿನ ಠೇವಣಿ ವಾಪಸ್ ಪಡೆಯುವುದರ ಮೇಲಿದ್ದ ನಿರ್ಬಂಧ ತೆರವುಗೊಳಿಸಲಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಸರ್ಕಾರದ ಈ ಕ್ರಮದಿಂದ ಬ್ಯಾಂಕಿನಲ್ಲಿ ಠೇವಣಿ ಇರಿಸಿದ್ದ 20 ಲಕ್ಷ ಠೇವಣಿದಾರರು ಹಾಗೂ 4 ಸಾವಿರ ಉದ್ಯೋಗಿಗಳ ಹಿತ ರಕ್ಷಣೆಯಾದಂತಾಗಿದೆ ಎಂದವರು ಹೇಳಿದ್ದಾರೆ.

ಎಲ್.ವಿ.ಬಿ. ಬ್ಯಾಂಕಿನ ಹಣಕಾಸು ಆರೋಗ್ಯ (7ನೇ ಪುಟಕ್ಕೆ)






## ಸವಲತ್ತು ತಲುಪದಿರುವುದು ಕಂಡರೆ ಕ್ರಮ

### ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಎಚ್ಚರಿಕೆ

ದಾವಣಗೆರೆ, ನ. 25- ಸರ್ಕಾರದ ಎಲ್ಲಾ ಇಲಾಖೆಯ ಸವಲತ್ತುಗಳೂ ಅರ್ಹ ಪ್ರತಿಯೊಬ್ಬರಿಗೂ ದೊರಕಬೇಕು. ಒಂದು ವೇಳೆ ಯಾವುದೇ ಇಲಾಖೆಯ ಸವಲತ್ತು ಅರ್ಹರಿಗೆ ತಲುಪದೇ ಇರುವುದು ಕಂಡು ಬಂದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.



ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿಂದು ಎರಡನೇ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಗ್ಗೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸುವಂತೆ ಜಿಲ್ಲಾಧಿಕಾರಿ ಗಳಿಗೆ ಸೂಚಿಸಿದರು.

ಸರ್ಕಾರದ ಯೋಜನೆಗಳ ಬಗ್ಗೆ ತಾಲ್ಲೂಕು ಮಟ್ಟದ ಇಲಾಖೆ ಗಳಲ್ಲಿ ಪ್ರಚಾರದ ಮೂಲಕ ಫಲಾನುಭವಿಗಳಿಗೆ ತಲುಪಿಸುವ ಕೆಲಸ ಮಾಡಬೇಕು. ಎಲ್ಲಾ ಯೋಜನೆಗಳು ನಿಗದಿತ ಕಾಲಮಿತಿಯೊಳಗೆ ಅನುಷ್ಠಾನವಾಗಬೇಕು. ಮುಂಬರುವ ದಿನಗಳಲ್ಲಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಗಳಿಗೆ ಚುನಾವಣೆ ಘೋಷಣೆ ಯಾಗಿ ನೀತಿ ಸಂಹಿತೆ ಜಾರಿಗೆ ಬರುತ್ತದೆ. ಯೋಜನೆಗಳಿಗೆ ಸಂಬಂಧಿಸಿದ ಅನುದಾನ ಖರ್ಚಾಗದೆ, ವಾಪಸ್ ಹೋದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಅನಿವಾರ್ಯ ಎಂದು ಹೇಳಿದರು.

ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ, ಪಿ.ಎಂ. ಕಿಸಾನ್ ಯೋಜನೆ ಹಣ ಹಾಗೂ ಮೆಕ್ಕೆಜೋಳ ಬೆಳೆದ ರೈತರಿಗೆ ನೀಡಲಾಗುವ 5 ಸಾವಿರ ರೂ. ಆರ್ಥಿಕ ನೆರವಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ರೈತರ ಪಟ್ಟಿ ಮಾಡಿ ಪ್ರತಿಯೊಬ್ಬರಿಗೂ ಹಣ ನೀಡಲು ಕ್ರಮ (7ನೇ ಪುಟಕ್ಕೆ)

### ಜಿಲ್ಲಾಸ್ಪತ್ರೆ ನವೀಕರಣವೋ ? ಪುನರ್ ನಿರ್ಮಾಣವೋ?

ಜಿಲ್ಲಾ ಚಿಗಟೇರಿ ಆಸ್ಪತ್ರೆ ಆಧುನೀಕರಣಕ್ಕೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದ್ದರಿಂದ ಆಸ್ಪತ್ರೆ ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ ಹೊಸದಾಗಿ ಕಟ್ಟಬೇಕೇ? ಅಥವಾ ನವೀಕರಣ ಮಾಡಬೇಕೇ? ಎಂಬ ಬಗ್ಗೆ ಪರಿಶೀಲನೆ ನಡೆಸಿ ಶೀಘ್ರವೇ ವಿಸ್ತೃತ ಯೋಜನಾ ವರದಿ ಸಲ್ಲಿಸುವಂತೆ ಪಿಡಬ್ಲೂಡಿ ಇಲಾಖೆ ಅಧಿಕಾರಿಗಳಿಗೆ ಸಚಿವ ಭೈರತಿ ಬಸವರಾಜ್ ಸೂಚಿಸಿದರು.

**ವಿಸ್ತೃತ ಯೋಜನಾ ವರದಿ ಸಲ್ಲಿಸುವಂತೆ ಸಚಿವರ ಸೂಚನೆ**

ಆಸ್ಪತ್ರೆಗಳ ವೈದ್ಯರು, ನರ್ಸ್‌ಗಳ ಕೊರತೆ ಬಗ್ಗೆ ಶಾಸಕರಾ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಪ್ರೊ.ಲಿಂಗಣ್ಣ ಸಭೆ ಗಮನಕ್ಕೆ ತಂದರು.

ಜಿಲ್ಲಾ ಆರೋಗ್ಯಾಧಿಕಾರಿ ನಾಗರಾಜ್, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಲ್ಲ. ಇದೀಗ ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಸಚಿವ ಭೈರತಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ನರ್ಸ್‌ಗಳು ಇರುವಂತೆ ನಿಗಾವಹಿಸಿ ಎಂದು ಸೂಚಿಸಿದರು.

ಆರೋಗ್ಯ ಇಲಾಖೆಯಲ್ಲಿ ಉಳಿದಿದ್ದ 5.50 ಕೋಟಿ ರೂಗಳನ್ನು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 1 ಲಕ್ಷ ರೂ.ಗಳ ವೆಚ್ಚದಲ್ಲಿ ಸೋಲಾರ್, ಲ್ಯಾಬ್ ಮುಂತಾದ ಕಾರ್ಯಗಳಿಗೆ ವಿನಿಯೋಗಿಸಲಾಗುವುದು ಎಂದರು. ಪ್ರಸ್ತುತ ಜಿಲ್ಲೆಯಲ್ಲಿ 56 ಕೊರೊನಾ ಪಾಸಿಟಿವ್ ರೋಗಿಗಳಿದ್ದು, 47 (7ನೇ ಪುಟಕ್ಕೆ)

## ಬನ್ನಿಕೋಡು ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಹೆಚ್.ಹೆಚ್.ನಾಗರಾಜ್ ಆಯ್ಕೆ



ಹರಿಹರ, ನ.25- ಬನ್ನಿಕೋಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರ ಚುನಾವಣೆಯಲ್ಲಿ ಹರಿಹರದ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಅವರ ಸಹೋದರ ಹಾಗೂ ದಿ|| ಹೆಚ್.ಹನುಮನಗೌಡ್ರು ಅವರ ಪುತ್ರ ಹೆಚ್.ಹೆಚ್.ನಾಗರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಸ್ಮಾರ್ಟ್ ಕಾಮಗಾರಿ ಚುರುಕಿಗೆ ಕ್ರಮ : ಸಚಿವ ಭೈರತಿ ಬಸವರಾಜ

ದಾವಣಗೆರೆ, ಜ. 25 – ನಗರದಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ ಚುರುಕುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರಿಗೆ, ಸ್ಮಾರ್ಟ್ ಸಿಟಿ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು ಪ್ರಶ್ನಿಸಿದಾಗ, ಮಳೆಗಾಲ ಮುಗಿದಿದೆ. ಇನ್ನು ಮುಂದೆ ಕೆಲಸಗಳು ವೇಗವಾಗಿ ನಡೆಯಲಿವೆ ಎಂದಿದ್ದಾರೆ.

ಬುಧವಾರ ಬೆಳಿಗ್ಗೆ ಸ್ಮಾರ್ಟ್ ಸಿಟಿ ಯೋಜನೆಯ ಕುರಿತು ಅಧಿಕಾರಿಗಳ ಜೊತೆ ಪರಿಶೀಲನೆ ನಡೆಸಿದ್ದೇನೆ. ಕಾಮಗಾರಿ ವಿಳಂಬವಾದ ಬಗ್ಗೆ ವಿವರ ಪಡೆದಿದ್ದೇನೆ. ಇನ್ನು ವೇಗವಾಗಿ ಕೆಲಸ ಮಾಡಲು ತಿಳಿಸಿದ್ದೇನೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಮತ್ತೆ ಪರಿಶೀಲನೆ ನಡೆಸುತ್ತೇನೆ ಎಂದು ತಿಳಿಸಿದರು.

ಮರಾಠ ನಿಗಮ ರಚಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮರಾಠ ಜನಾಂಗದವರಿಗೆ ನಿಗಮ ರಚಿಸಲಾಗಿದೆಯೇ ಹೊರತು ಮರಾಠ ಭಾಷಿಗರಿಗೆ ಅಲ್ಲ. ಸರ್ಕಾರ ಕನ್ನಡಕ್ಕೆ ಧಕ್ಕೆ ತರುವ ಕೆಲಸ ಮಾಡಲ್ಲ. ನಾವು ಕನ್ನಡ ಉಳಿಸಿ ಬೆಳೆಸುವ ಕೆಲಸ ಮಾಡುತ್ತೇವೆ. ನಾವು ಕನ್ನಡ ಸಂಘಟನೆಗಳ ಜೊತೆ ಇರುತ್ತೇವೆ ಎಂದು ತಿಳಿಸಿದರು.

ಚಿಗಟೇರಿ ಆಸ್ಪತ್ರೆಯನ್ನು ಹೊಸದಾಗಿ ನಿರ್ಮಿಸುವ ಪ್ರಸ್ತಾವನೆ ಇದೆ. ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಿದಾಗ ಈ ಬಗ್ಗೆ ಚರ್ಚಿಸಲಾಗಿದೆ. ಹೊಸ ಆಸ್ಪತ್ರೆಗಾಗಿ ವಿಸ್ತೃತ ಯೋಜನಾ ವರದಿ ರೂಪಿಸಲು ತಿಳಿಸಲಾಗಿದೆ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಶಾಸಕರು ಭೇಟಿ ಮಾಡುತ್ತಿರುವುದರಲ್ಲಿ ವಿಶೇಷವೇನಿಲ್ಲ ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಭೈರತಿ, ಇಲಾಖೆಯ ಕೆಲಸಕ್ಕಾಗಿ ಶಾಸಕರು ಭೇಟಿ ಮಾಡುತ್ತಾರೆ. ಈ ಸಂದರ್ಭದಲ್ಲಿ ರಾಜಕೀಯ ಚರ್ಚೆಗಳು ನಡೆದಿಲ್ಲ. ನನ್ನ ಬಳಿಯೂ ಹಲವು ಶಾಸಕರು ಬರುತ್ತಾರೆ ಎಂದು ತಿಳಿಸಿದರು.


## ರೈತರ ಫಸಲು ಪರಿವರ್ತನಾ, ವ್ಯಾಪಾರೋದ್ಯಮ ಸಂಘದ ಅಧ್ಯಕ್ಷರಾಗಿ ಪವಿತ್ರ ಶಾಮನೂರು



ದಾವಣಗೆರೆ, ನ.26- ನಗರದ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ ಆಡಳಿತ ಮಂಡಳಿ ಅಧ್ಯಕ್ಷರಾಗಿ ಸಾಮಾನ್ಯ ಕ್ಷೇತ್ರಕ್ಕೆ ಎಸ್.ಕೆ. ಪವಿತ್ರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಿ.ಎಸ್. ಸುರೇಂದ್ರ ತಿಳಿಸಿದ್ದಾರೆ.










## ಪಾಲಿಕೆ ರಾಷ್ಟ್ರದಲ್ಲೇ ಮೊದಲು

**(1ನೇ ಪುಟದಿಂದ)** ರವೀಂದ್ರನಾಥ್, ಮನೆ ಬಾಗಿಲಿಗೆ ಪಾಲಿಕೆ ಎಂಬ ಕಾರ್ಯಕ್ರಮ ಈಗ ಆರಂಭಿಸಲಾಗುತ್ತಿದೆ ಎಂದರೆ ಇದುವರೆಗೂ ಸೇವೆಗಳು ಸರಿಯಾಗಿರಲಿಲ್ಲ. ನೂತನ ಕಾರ್ಯಕ್ರಮವನ್ನು ಪ್ರಚಾರಕ್ಕೆಂಬಂತೆ ಮಾಡಿ ನಿಲ್ಲಿಸದೇ ನಿರಂತರವಾಗಿ ಸೌಲಭ್ಯ ಕಲ್ಪಿಸಿ ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಪ್ರತಿಪಕ್ಷದ ನಾಯಕ ಎ.ನಾಗರಾಜ್, ಮನೆ ಬಾಗಿಲಿಗೆ ಪಾಲಿಕೆ ಯೋಜನೆಯಡಿ ಸಲ್ಲಿಕೆಯಾದ ಅರ್ಜಿಗಳು ಅಂದೇ ವಿಲೇವಾರಿಯಾಗಬೇಕು. ಕಾಂಗ್ರೆಸ್‌ನ 5-6 ಸದಸ್ಯರ ವಾರ್ಡುಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದ್ದು, ಇದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್, ಪಾಲಿಕೆಯ ಪ್ರತಿ ವಾರ್ಡ್‌ಗೆ ತಲಾ ಹತ್ತು ಕೋಟಿ ರೂ. ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿದರೆ ಇಡೀ ನಗರ ಸ್ವಚ್ಛವಾಗಲಿದೆ. ಇದಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ವೇದಿಕೆಯ ಮೇಲೆ ಉಪ ಮೇಯರ್ ಸೌಮ್ಯ ನರೇಂದ್ರ ಕುಮಾರ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಸ್.ಟಿ. ವೀರೇಶ್, ಕೆ. ಪ್ರಸನ್ನಕುಮಾರ್, ಗೌರಮ್ಮ ಗಿರೀಶ್, ಜಯಮ್ಮ ಗೋಪಿನಾಯ್ಕ, ಗಾಂಧಿನಗರದ ಪಾಲಿಕೆ ಸದಸ್ಯ ಜೆ.ಡಿ. ಪ್ರಕಾಶ್, ಎಎಸ್‌ಪಿ ರಾಜೀವ್ ಮತ್ತಿತರರು ಉಪಸ್ಥಿತರಿದ್ದರು. ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸ್ವಾಗತಿಸಿದರು. ರೇಷ್ಮಾ ಹಾನಗಲ್ ವಂದಿಸಿದರು.

## ವೈದ್ಯಕೀಯ ಕಾಲೇಜು ಆರಂಭ

**(1ನೇ ಪುಟದಿಂದ)** ತಿಳಿಸಲಾಗಿದೆ. ಈಗಾಗಲೇ ಎಂ.ಬಿ.ಬಿ.ಎಸ್. ಅಧ್ಯಯನಕ್ಕೆ ಸೇರ್ಪಡೆ ಯಾಗಿರುವವರಿಗಾಗಿ ಡಿಸೆಂಬರ್ 1ರ ಒಳಗೆ ತರಗತಿಗಳನ್ನು ಆರಂಭಿಸುವಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಪ್ರಸಕ್ತ ವರ್ಷದ ನಿವಾಸಿ ವೈದ್ಯರು ತಮ್ಮ ವೈದ್ಯಕೀಯ ತರಬೇತಿಯನ್ನು ಇನ್ನೂ ಪೂರ್ಣಗೊಳಿಸಿಲ್ಲ. ಅವರು ತರಬೇತಿ ಪಡೆಯದೇ ಪಿಜಿ - ನೀಟ್ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದು ಎಂದು ವಿದ್ಯಾರ್ಥಿಗಳು ಹಾಗೂ ವೈದ್ಯಕೀಯ ಕಾಲೇಜುಗಳು ಮನವಿ ಸಲ್ಲಿಸಿದ್ದವು.

ವೈದ್ಯಕೀಯ ಕಾಲೇಜುಗಳನ್ನು ತೆರೆಯಬೇಕಾದರೆ, ಸಂಬಂಧಿಸಿದ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದ ಕೋವಿಡೇತರ ರೋಗಿಗಳ ಅಗತ್ಯವಿದೆ. ಇದುವರೆಗೂ ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ, ಈಗ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

# ರಾಷ್ಟ್ರಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಟೂರ್ನಿ ಆರಂಭ

## ಬ್ಯಾಟಿಂಗ್ ಮುಖೇನ ಎಸ್ಸೆಸ್ - ಕೊಂಡಯ್ಯ ವಿಧ್ಯುಕ್ತ ಚಾಲನೆ



ದಾವಣಗೆರೆ, ನ.25- ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ 13ನೇ ಬಾರಿಗೆ ದಿ. ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿನೆನಪಿನ ಅಂಗವಾಗಿ 5 ದಿನಗಳ ಶಾಮನೂರು ಡೈಮಂಡ್ ಹಾಗೂ ಶಿವಗಂಗಾ ಕಪ್ ರಾಷ್ಟ್ರಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಟೂರ್ನಿಗೆ ಇಂದು ಸಂಜೆ ಚಾಲನೆ ದೊರೆಕಿತು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿರುವ ಪಂದ್ಯಾವಳಿಗೆ ಶಾಸಕರುಗಳಾದ ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಕೆ.ಸಿ. ಕೊಂಡಯ್ಯ ಅವರು ಬ್ಯಾಟಿಂಗ್ ಮಾಡುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ಕೆ.ಸಿ. ಕೊಂಡಯ್ಯ, ಕ್ರೀಡಾಪಟುಗಳ ಪ್ರೋತ್ಸಾಹಿಸುವ ಮತ್ತು ಕ್ರೀಡಾಸಕ್ತರ ಮನವ ರಂಜಿಸುತ್ತಾ ಕ್ರಿಕೆಟ್ ಆಟಕ್ಕೆ ಜೀವ ತುಂಬುವ ನಿಟ್ಟಿನಲ್ಲಿ ಈ ವರ್ಷವೂ ಆಯೋಜಿಸಲಾಗಿರುವ ಈ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಯಾಗಲಿ. ಮುಂದಿನ ದಿನಗಳಲ್ಲೂ ದೊಡ್ಡ ಪ್ರಮಾಣದಲ್ಲಿ ನಡೆಯಲಿ ಎಂದು ಆಶಿಸಿದರು.

ಅಥಣಿ ವೀರಣ್ಣ ಮಾತನಾಡಿ, ಇಂದಿನಿಂದ ಇದೇ ದಿನಾಂಕ 29ರವರೆಗೆ ಈ ಕ್ರಿಕೆಟ್ ಪಂದ್ಯಾವಳಿ ಚಿರಸ್ಮರಣೆಯ ದಿನವಾಗಿದ್ದು, ಅದ್ಧೂರಿಯಾಗಿ ದಾವಣಗೆರೆಯಲ್ಲಿ ಜನ ಮೆಚ್ಚುವಂತಹ ಮತ್ತು ಮನಮುಟ್ಟುವ ಪಂದ್ಯಾವಳಿ ಇದಾಗಿದೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಕ್ರಿಕೆಟ್ ಪಂದ್ಯಾವಳಿ ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತಿದ್ದು, ಈ ಪಂದ್ಯಾವಳಿಯಲ್ಲಿ ಅಂತರರಾಜ್ಯ ಕ್ರಿಕೆಟ್ ಪಟುಗಳು ಭಾಗವಹಿಸಿರುವುದು ಕ್ರೀಡಾಭಿಮಾನಿಗಳಿಗೆ ಹಬ್ಬವನ್ನುಂಟು ಮಾಡಲಿದೆ. ಈ ಪಂದ್ಯಾವಳಿ ಯಶಸ್ವಿಯಾಗಲೆಂದರು.

ಈ ಟೂರ್ನಿಯಲ್ಲಿ ಹೊರ ರಾಜ್ಯದ ಕೇರಳ, ಚೆನ್ನೈ, ಗೋವಾ, ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯದ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ತುಮಕೂರು, ಶಿವಮೊಗ್ಗ, ಹುಬ್ಬಳ್ಳಿ ಸೇರಿದಂತೆ ಒಟ್ಟು 24 ತಂಡಗಳು ಭಾಗವಹಿಸಿವೆ. ವಿಶೇಷವಾಗಿ ಪೊಲೀಸ್ ತಂಡ, ಪತ್ರಕರ್ತರ ತಂಡ, ವರ್ತಕರ ತಂಡ, ಜಿಲ್ಲಾಧಿಕಾರಿಗಳ ತಂಡ, ನಗರ ಪಾಲಿಕೆ ಸದಸ್ಯರ ತಂಡ, ವಕೀಲರ ತಂಡ ಸೇರಿ ಒಟ್ಟು 8 ಅಫೀಶಿಯಲ್ ಕಪ್ ಪಂದ್ಯಾವಳಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ದಾವಣಗೆರೆ ಇಲೆವೆನ್ಸ್ ಮತ್ತು ಚಿತ್ರದುರ್ಗದ ಎಸ್ ಎಂಸಿಸಿ ರಾಕರ್ಸ್ ತಂಡದ ಮಧ್ಯೆ ಮೊದಲ ಪಂದ್ಯ ನಡೆಯಿತು. ಟಾಸ್ ಗೆದ್ದು ದಾವಣಗೆರೆ ಇಲೆವೆನ್ಸ್ ತಂಡ ಬ್ಯಾಟಿಂಗ್ ಗಿಳಿಯಿತು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ಬಿ.ಹೆಚ್. ವೀರಭದ್ರಪ್ಪ, ಎನ್.ಎ. ಮುರುಗೇಶ್, ಶಿವಗಂಗಾ ಶ್ರೀನಿವಾಸ, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ರಾಜು ರೆಡ್ಡಿ, ಇಂದ್ರಪ್ಪ, ಮಹಾದೇವ, ಸಿಪಿಐ ಶಂಕರ್, ಸಂಘದ ಸಹ ಕಾರ್ಯದರ್ಶಿ ಜಯಪ್ರಕಾಶ್ ಗೌಡ, ಕುರುಡಿ ಗಿರೀಶ್, ಟಿ. ಯುವರಾಜ್, ಶಿವಣ್ಣ, ಚಂದ್ರು, ಮಧು, ರಂಗಸ್ವಾಮಿ, ಶಿವಕುಮಾರ್, ಆಕಾಶ್, ರಾಘವೇಂದ್ರ, ಯೋಗೀಶ್, ಗಣೇಶ್, ವರುಣ್, ಪ್ರಕಾಶ್ ಸೇರಿದಂತೆ ಇತರರು ಇದ್ದರು.

## ಪಾವತಿಸದಿದ್ದರೆ ತರಗತಿ ರದ್ದು

**(1ನೇ ಪುಟದಿಂದ)** ಮೊದಲ ಕಂತಿನ ಶುಲ್ಕವನ್ನು ಪಾವತಿ ಮಾಡದಿದ್ದರೆ, ಅಂತಹ ವಿದ್ಯಾರ್ಥಿಗಳ ಆನ್‌ಲೈನ್ ತರಗತಿಗಳನ್ನು ಬಂದ್ ಮಾಡಲಾಗುವುದು ಎಂದು ಎಚ್ಚರಿಸಿದೆ.

ಯಾವುದೇ ಒಬ್ಬ ವಿದ್ಯಾರ್ಥಿಯು ಶುಲ್ಕ ಪಾವತಿ ಮಾಡದಿದ್ದರೆ ಅಂಥವರಿಗೆ ಆನ್‌ಲೈನ್ ಶಿಕ್ಷಣವನ್ನು ಕಡಿತಗೊಳಿಸಬಾರದು. ಒಂದು ವೇಳೆ ಇಂಥ ಪ್ರಕರಣ ಎಲ್ಲಾದರೂ ಕಂಡುಬಂದರೆ ಅಂತಹ ಶಾಲೆಯ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಸಚಿವ ಎಸ್.ಸುರೇಶ್‌ಕು ಮಾರ್ ಎಚ್ಚರಿಕೆ ನೀಡಿದ್ದರು. ಆದರೆ, ವಿದ್ಯುತ್, ನೀರು, ಸಿಬ್ಬಂದಿ ಹಾಗೂ ಶಿಕ್ಷಕರ ವೇತನ ಸೇರಿದಂತೆ ಮತ್ತಿತರೆ ಕಾರಣಗಳಿಗಾಗಿ ನಮ್ಮಿಂದ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಪೋಷಕರು ಶುಲ್ಕ ಪಾವತಿಸದಿ ದ್ದರೆ ಅಂತಹ ವಿದ್ಯಾರ್ಥಿಯ ಆನ್‌ಲೈನ್ ತರಗತಿಯನ್ನು ರದ್ದುಪಡಿಸುವುದು ಅನಿವಾರ್ಯ ಎಂಬುದು ಖಾಸಗಿ ಶಾಲೆಯವರ ವಾದವಾಗಿದೆ.

ಇದರಿಂದ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ಇದೇ ಶನಿವಾರ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ನೇತೃತ್ವದಲ್ಲಿ ಖಾಸಗಿ ಶಾಲಾ ಆಡಳಿತ ಮಂಡಳಿಯ ಪ್ರಮುಖರ ಸಭೆ ಕರೆದಿದೆ. ಕಳೆದ 8 ತಿಂಗಳಿನಿಂದ ಪೋಷಕರು ತಮ್ಮ ಮಕ್ಕಳ ಶುಲ್ಕವನ್ನು ಪಾವತಿಸುತ್ತಿಲ್ಲ. ಇದರಿಂದ ನಾವು ಶಾಲೆಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಪೋಷಕರಿಗೆ ಶುಲ್ಕ ಕಟ್ಟುವಂತೆ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇವೆ. ಆದರೂ ಏನೂ ಪ್ರಯೋಜನವಾಗಿಲ್ಲ. ಹೀಗಾಗಿ ಕ್ರಮ ಅನಿವಾರ್ಯ ಎಂದು ಖಾಸಗಿ ಶಾಲೆಯವರು ಹೇಳುತ್ತಿದ್ದಾರೆ.

ಬಹುತೇಕ ಖಾಸಗಿ ಶಾಲೆಗಳಲ್ಲಿ ಐಸಿಎಸ್ಸಿ ಮತ್ತು ಸಿಬಿಎಸ್ಸಿ ಪಠ್ಯಕ್ರಮವನ್ನು ಬೋಧಿಸಲಾಗುತ್ತಿದ್ದು, ರಾಜ್ಯ ಸರಕಾರ ಇವುಗಳ ಮಾನ್ಯತೆಯನ್ನು ಸಹ ರದ್ದು ಮಾಡಲು ಸಾಧ್ಯವಿಲ್ಲ. ತಪ್ಪಿತಸ್ಥ ಶಾಲೆಗಳ ವಿರುದ್ಧ ಕೆಲವೊಮ್ಮೆ ಕೇವಲ ಬಿಡಿಗಾಸು ದಂಡ ವಿಧಿಸಿ, ಶಿಕ್ಷಣ ಇಲಾಖೆ ಕೈ ತೊಳೆದುಕೊಳ್ಳುತ್ತಿದೆಯೇ ಹೊರತು, ಇಂತಹ ಶಾಲೆಗಳನ್ನು ನಿಯಂತ್ರಿಸಲು ಮುಂದಾಗುತ್ತಿಲ್ಲ.

## 'ಲಕ್ಷ್ಮಿ ವಿಲಾಸ್' ವಿಲೀನಕ್ಕೆ ಸಮ್ಮತಿ

**(1ನೇ ಪುಟದಿಂದ)** ಹದಗೆಡಿಸಲು ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಜಾವಡೇಕರ್ ತಿಳಿಸಿದ್ದಾರೆ.ಎಲ್.ವಿ.ಬಿ. ಬ್ಯಾಂಕಿನಿಂದ 25 ಸಾವಿರ ರೂ.ಗಳಿಗಿಂತ ಹೆಚ್ಚಿನ ಹಣ ಬಿಡಿಸಿಕೊಳ್ಳದಂತೆ ಕೇಂದ್ರ ಸರ್ಕಾರ ನವೆಂಬರ್ 17ರಂದು ನಿರ್ಬಂಧ ಹೇರಿತ್ತು. ಇದೇ ವೇಳೆ ಆರ್.ಬಿ.ಐ. ಬ್ಯಾಂಕುಗಳ ವಿಲೀನ ಪ್ರಸ್ತಾಪವನ್ನೂ ಬಹಿರಂಗ ಪಡಿಸಿತ್ತು.

ಎಲ್.ವಿ.ಬಿ. ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಿದ್ದ ಆರ್.ಬಿ.ಐ., ಕೆನರಾ ಬ್ಯಾಂಕ್‌ನ ಮಾಜಿ ಕಾರ್ಯಕಾರೇತರ ಅಧ್ಯಕ್ಷ ಟಿ.ಎನ್. ಮನೋಹರನ್ ಅವರನ್ನು 30 ದಿನಗಳ ಅವಧಿಗೆ ಬ್ಯಾಂಕಿನ ಆಡಳಿತಾಧಿಕಾರಿಯಾಗಿ ನೇಮಿಸಿತ್ತು. ಯೆಸ್ ಬ್ಯಾಂಕ್ ನಂತರ ಸಂಕಷ್ಟಕ್ಕೆ ಸಿಲುಕಿದ ಎರಡನೇ ಬ್ಯಾಂಕ್ ಎಲ್.ವಿ.ಬಿ. ಆಗಿದೆ.


**WANTED**

ಬ್ಯೂಟಿಷಿಯನ್ಸ್ ಹಾಗೂ ಸಹಾಯಕರು (ಹೆಲ್ಪರ್ಸ್) ಬೇಕಾಗಿದ್ದಾರೆ.
Beauticians & Helpers wanted.

ಶಾಕಿರ ಬ್ಯೂಟಿ ಪಾರ್ಲರ್
SHAKEERA Beauty Parlour
#741, ಮೋದಿ ಕಾಂಪೌಂಡ್ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ.
93420 19013

ಶಾಕಿರ ಗಾರ್ಮೆಂಟ್ಸ್
Plot No. 57, Karuru Industrial Area,
D.C. Office Main Road, Davanagere.
200 ಜನ ಅನುಭವವುಳ್ಳ ಟೈಲರ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಹೊಸಬರಿಗೂ ತರಬೇತಿ ಕೊಡಲಾಗುವುದು.
Wanted 200 Tailors & Helpers
97434 46516
70198 38653


# ಸವಲತ್ತು ತಲುಪದಿರುವುದು ಕಂಡರೆ ಕ್ರಮ



**(1ನೇ ಪುಟದಿಂದ)** ಕೈಗೊಳ್ಳಬೇಕು ಎಂದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಮಾತನಾಡಿ, ಮೆಕ್ಕೆಜೋಳ ಬೆಳೆದ, ಏಕ ಮಾಲೀಕತ್ವದ ಎಲ್ಲಾ ರೈತರಿಗೂ 5 ಸಾವಿರ ರೂ. ಹಣವನ್ನು ಖಾತೆಗಳಿಗೆ ಜಮೆ ಮಾಡಲಾಗಿದೆ. ಜಂಟಿ ಖಾತೆ ಇರುವಲ್ಲಿ ಸ್ವಲ್ಪ ತಡವಾಗಿದೆ. ಇದೀಗ ಸರ್ಕಾರ ಜಂಟಿ ಖಾತೆಗಳಿಗೂ ಹಣ ನೀಡಲು ತಿಳಿಸಿದ್ದು, ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

**ಫ್ಲೋರೈಡ್ ಕುರಿತು ಸಮಗ್ರ ವರದಿಗೆ ಸೂಚನೆ:** ಹರಿಹರ, ಹೊನ್ನಾಳಿಯಲ್ಲಿ ಫ್ಲೋರೈಡ್ ಯುಕ್ತ ನೀರು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿರುವ ಬಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ಸಭೆಯಲ್ಲಿ ಪ್ರಸ್ತಾಪಿಸಿದರು.

ಸಿಇಒ ಪದ್ಮಾ ಬಸವಂತಪ್ಪ ಮಾತನಾಡಿ, ಫರ್ಟಿಲೈಜರ್ ಹಾಗೂ ಫೆಸ್ಟಿಸೈಡ್ ಕಂಪನಿಗಳು ಫ್ಲೋರೈಡ್ ಯುಕ್ತ ನೀರನ್ನು ನದಿಗೆ ಬಿಡುವುದರಿಂದ ಸಮಸ್ಯೆ ಉಂಟಾಗಿದೆ ಎಂದರು. ಫ್ಲೋರೈಡ್ ಅಂಶ ಇರುವೆಡೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸರ್ಕಾರ ಅನುಮತಿಸಿದ್ದು, ಘಟಕಗಳನ್ನು ಆರಂಭಿಸಲಾಗುವುದು ಎಂದರು.

ಸಚಿವ ಭೈರತಿ, ಫ್ಲೋರೈಡ್ ಬಗ್ಗೆ ಮತ್ತೊಮ್ಮೆ ವೈದ್ಯರು, ಅಧಿಕಾರಿಗಳೊಂದಿಗೆ ಪರಿಶೀಲಿಸಿ ಸಮಗ್ರ ವರದಿ ನೀಡುವಂತೆ ಸೂಚಿಸಿದರು.

**ಜಲಜೀವನ್‌ಗೆ 370 ಗ್ರಾಮ ಆಯ್ಕೆ:** ಕೇಂದ್ರ ಸರ್ಕಾರದ ಜಲಜೀವನ್ ಯೋಜನೆಯಡಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಕೊಡಲು ಈ ವರ್ಷ 370 ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. 150 ಗ್ರಾಮಗಳಿಗೆ ಪ್ರಸ್ತಾವನೆ ಸಿದ್ಧವಾಗಿದೆ.

ಸದ್ಯ 49 ಗ್ರಾಮಗಳಿಗೆ ಟೆಂಡರ್ ಕರೆಯಲಾಗಿದ್ದು, ಡಿಸೆಂಬರ್ ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಜಿ.ಪಂ. ಸಿಇಒ ಪದ್ಮಾ ಮಾಹಿತಿ ನೀಡಿದರು.

**ಅಧಿಕಾರಿ ಸಸ್ಪೆಂಡ್:** ಅಲ್ಪಸಂಖ್ಯಾತರ ನಿಗಮದ ಅಧಿಕಾರಿ ಇಂದು ಹಾಗೂ ಹಿಂದಿನ ಸಭೆಗಳಿಗೆ ಹಾಜರಾಗದ ಕಾರಣ ಅಸಮಾಧಾನಗೊಂಡ ಸಚಿವರು ಅಧಿಕಾರಿಯನ್ನು ಅಮಾನತ್ತು ಗೊಳಿಸುವಂತೆ ಆದೇಶಿಸಿದರು.

ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಮಾಡಾಳ್ ವಿರುಪಾಕ್ಷಪ್ಪ, ವಿಧಾನಪರಿಷತ್ ಸದಸ್ಯ ರವಿಕುಮಾರ್, ಜಿ.ಪಂ. ಅಧ್ಯಕ್ಷೆ ದೀಪಾ ಜಗದೀಶ್, ಉಪಾಧ್ಯಕ್ಷೆ ಸಾಕಮ್ಮ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಪದ್ಮಾ ಬಸವಂತಪ್ಪ, ಎಎಸ್ಪಿ ರಾಜೀವ್ ಇತರರಿದ್ದರು.

## ಶಾಲೆಗಳಲ್ಲಿ ಶೌಚಾಲಯ, ನೀರಿನ ವ್ಯವಸ್ಥೆ ಸಮರ್ಪಕವಾಗಿರಲಿ

ಕೊರೊನಾ ಸೋಂಕು ಇಳಿಕೆ ಮುಖವಾಗಿದ್ದು, ಮುಂದಿನ ದಿನಗಳಲ್ಲಿ ಶಾಲೆಗಳು ಆರಂಭವಾಗಲಿವೆ. ಅಷ್ಟರಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಹಾಗೂ ನೀರಿನ ಸಮರ್ಪಕ ವ್ಯವಸ್ಥೆ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಚಿವ ಭೈರತಿ ಬಸವರಾಜ್ ಅಧಿಕಾರಿಗಳಿಗೆ ಸೂಚಿಸಿದರು.

ದುರಸ್ತಿ ಮಾಡಬೇಕಿರುವ ಶೌಚಾಲಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆಯಾ ಕ್ಷೇತ್ರದ ಶಾಸಕರುಗಳ ಗಮನಕ್ಕೆ ತರಬೇಕು. ಹೆಚ್ಚೆಂದರೆ ಕ್ಷೇತ್ರಕ್ಕೆ 5 ರಿಂದ 6 ಲಕ್ಷ ರೂ. ವೆಚ್ಚವಾಗಬಹುದು. ಹೀಗಾಗಿ ಈ ಮೊತ್ತವನ್ನು ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದಲೇ ದುರಸ್ತಿ ಕಾರ್ಯ ಕೈಗೊಳ್ಳಬಹುದಾಗಿದೆ. ಶಾಸಕರುಗಳು ಕೂಡ ಇದಕ್ಕೆ ಸಮ್ಮತಿ ಸೂಚಿಸುವ ವಿಶ್ವಾಸವಿದೆ ಎಂದರು. ಇದಕ್ಕೂ ಮುನ್ನ ಮಾತನಾಡಿದ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ , ಜಿಲ್ಲೆಯಲ್ಲಿ ಒಟ್ಟು 1250 ಸರ್ಕಾರಿ ಶಾಲೆಗಳಿದ್ದು, ಇವುಗಳಲ್ಲಿ ಬಾಲಕರಿಗೆ ಹಾಗೂ ಬಾಲಕಿಯರಿಗಾಗಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಬಹಳಷ್ಟು ಕಡೆಗಳಲ್ಲಿ ಶೌಚಾಲಯಗಳು ದುಸ್ಥಿತಿಯಲ್ಲಿದ್ದು, ಬಳಕೆಗೆ ಯೋಗ್ಯವಾಗಿಲ್ಲ. ಹೀಗಾಗಿ ಈ ವರ್ಷ ಶೌಚಾಲಯಗಳ ದುರಸ್ತಿಗಾಗಿ 29 ಲಕ್ಷ ರೂ. ಗಳ ಕ್ರಿಯಾ ಯೋಜನೆ ತಯಾರಿಸಲಾಗಿದೆ ಎಂದು ಹೇಳಿದರು.

## ಬೋರ್ ಕೊರೆಯದ ಏಜೆನ್ಸಿ: ಅಸಮಾಧಾನ

2019-20ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಇನ್ನೂ ಬೋರ್ ಕೊರೆದಿಲ್ಲ ಎಂದು ಶಾಸಕ ಮಾಡಾಳು ಅಸಮಾಧಾನ ವ್ಯಕ್ತಪಡಿಸಿದಾಗ, ಅಧಿಕಾರಿಗಳು ಈ ಬಗ್ಗೆ ಗುತ್ತಿಗೆದಾರರಿಗೆ ನೋಟೀಸ್ ನೀಡಿರುವುದಾಗಿ ಹೇಳಿದರು. ಸಚಿವ ಭೈರತಿ ಬಸವರಾಜ್, ನೋಟೀಸ್ ಕೊಟ್ಟರೆ ಸಾಲದು, ಕ್ರಮ ಕೈಗೊಳ್ಳಬೇಕು ಎಂದು ಗರಂ ಆದಾಗ, ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ, ಏಜೆನ್ಸಿ ಅವರನ್ನು ಕರೆಯಿಸಿ ಚರ್ಚಿಸಿ ಬೋರ್ ಕೊರೆಸಲು ಸೂಚಿಸುತ್ತೇವೆ. ನಿರ್ಲಕ್ಷಿಸಿದರೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

## ಅರಸು ನಿಗಮದಲ್ಲಿ ಮಧ್ಯವರ್ತಿಗಳ ಹಾವಳಿ

ದೇವರಾಜ ಅರಸು ನಿಗಮದಲ್ಲಿ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ ಬಗ್ಗೆ ದೂರುಗಳು ಹೆಚ್ಚಾಗುತ್ತಿವೆ. ಗಂಗಾ ಕಲ್ಯಾಣ ಯೋಜನೆ ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿ ನಡೆದಿದೆಯೇ? ಎಂದು ಸಂಸದ ಸಿದ್ದೇಶ್ವರ್ ಅಧಿಕಾರಿಗಳನ್ನು ಪ್ರಶ್ನಿಸಿದರು. ಸಿಇಒ ಅಧ್ಯಕ್ಷತೆಯಲ್ಲಿ ಲಾಟರಿ ಮೂಲಕ ಫಲಾನುಭವಿಗಳ ಆಯ್ಕೆ ನಡೆದಿದ್ದು, ಎಲ್ಲವೂ ಪಾರದರ್ಶಕವಾಗಿದೆ. ವೀಡಿಯೋ ಮಾಡಲಾಗಿದೆ ಎಂದು ಅಧಿಕಾರಿ ಸ್ಪಷ್ಟಪಡಿಸಿದರು.

## ನವೀಕರಣವೋ ? ಪುನರ್ ನಿರ್ಮಾಣವೋ?

**(1ನೇ ಪುಟದಿಂದ)** ಜನರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಡಿಹೆಚ್‌ಒ ಮಾಹಿತಿ ನೀಡಿದರು. ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲಾಸ್ಪತ್ರೆಯಲ್ಲಿ ಎಲ್ಲಾ 32 ವೆಂಟಿಲೇಟರ್ ಗಳನ್ನು ಬಳಸಲಾಗುತ್ತಿದೆ. ಸಾವಿನ ಪ್ರಮಾಣ ಶೇ.0.6ಆಗಿದೆ ಎಂದರು. ಶಾಸಕ ಎಸ್.ಎ. ರವೀಂದ್ರನಾಥ್, ಆಸ್ಪತ್ರೆಯ ಲಿಫ್ಟ್ ಹಲವು ದಿನಗಳಿಂದ ರಿಪೇರಿಯಾಗದ ಬಗ್ಗೆ ಪ್ರಸ್ತಾಪಿಸಿದಾಗ, ಡಿ.4 ರಂದು ತಾವು ಮತ್ತೆ ನಗರಕ್ಕಾಗಿಸುವ ವೇಳೆಗೆ ಲಿಫ್ಟ್ ರಿಪೇರಿ ಆಗಿರುವಂತೆ ನೋಡಿಕೊಳ್ಳಿ ಎಂದು ಉಸ್ತುವಾರಿ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

## ನಗರದಾದ್ಯಂತ ಎಲ್‌ಇಡಿ ದೀಪಗಳ ಅಳವಡಿಕೆ

**(1ನೇ ಪುಟದಿಂದ)** ತಿಳಿಸಿದರು. ಒಂದು ಲಕ್ಷ ಸಸಿ ನೆಡುವು ಕಾರ್ಯಕ್ರಮದ ಅನ್ವಯ ಪ್ರತಿ ವಾರ್ಡ್‌ನಲ್ಲಿ ಪಕ್ಷಿಗಳಿಗೆ ಆಹಾರ ಉಣಿಸಲು ನೆರವಾಗುವ ತಲಾ 100 ಹಣ್ಣಿನ ಸಸಿಗಳನ್ನು ನೆಡಲಾಗುವುದು. ಮುಂದಿನ ಜೂನ್ ಒಳಗೆ ಎಲ್ಲಾ ಲಕ್ಷ ಸಸಿಗಳನ್ನು ವಾರ್ಡ್‌ಗಳಲ್ಲಿ ನೆಡುವ ಮೂಲಕ ಹಸಿರೀಕರಣ ಮಾಡಲಾಗುವುದು ಎಂದು ಅಜಯ್‌ಕುಮಾರ್ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.


### ಸಾರ್ವಜನಿಕ ಪ್ರಕಟಣೆಗಾಗಿ

ಜಿ.ಆರ್. ಮಂಜುಳ ಕೋಂ. ಪಿ.ಆರ್. ಹನುಮಂತಪ್ಪ, ವಯಸ್ಸು ಸುಮಾರು 65 ವರ್ಷ, ಹಾಲಿ ವಾಸ : ದಾವಣಗೆರೆ ಸಿಟಿ, ಬಾಪೂಜಿ ವಿದ್ಯಾನಗರ, ತರಳಬಾಳು ಬಡಾವಣೆ, ಚಿಗಟೇರಿ ಟವರ್, ಹದಡಿ ರೋಡ್, ಮನೆ. ನಂ. 1344/1 ರಲ್ಲಿಯ ವಾಸಿಯಾದ ನಾನು ಈ ಸಾರ್ವಜನಿಕ ಪ್ರಕಟಣೆಯ ಮುಖೇನ ತಿಳಿಸುವುದೇನೆಂದರೆ :

ನನ್ನ ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ನನ್ನ ಎಸ್.ಬಿ.ಐ. ಬ್ಯಾಂಕ್ ಪಾಸ್ ಬುಕ್‌ನಲ್ಲಿಯೂ ಸಹ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ನನ್ನ ಪಾನ್ ಕಾರ್ಡ್‌ನಲ್ಲಿ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ನನ್ನ ಐ.ಡಿ. ಕಾರ್ಡ್‌ನಲ್ಲಿ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ನನ್ನ ಮಗನ ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ಎಸ್.ಬಿ.ಐ.ನಲ್ಲಿ ನಾನು ಬಂಗಾರದ ಆಭರಣದ ಮೇಲೆ ಸಾಲವನ್ನು ನಾನು ಪಡೆದಿದ್ದು, ಸದರಿ ಸಮಯದಲ್ಲಿ ನನ್ನ ಹೆಸರು ಜಿ.ಆರ್. ಮಂಜುಳ ಎಂದು ಇದ್ದು, ಆದರೆ ನನ್ನ ಯಜಮಾನರ ARMY SERVICE Registered is mentioned as G.R. Mansamma and in ARMY Discharge Certificate is centioned as G.R. Mansamma ಎಂದು ಬರೆಸಲಾಗಿದ್ದು, ನನ್ನ ಹೆಸರುಗಳು ಒಂದೊಂದು ದಾಖಲೆಗಳಲ್ಲಿ ಒಂದಾಗಿದ್ದು, ಸದರಿ ವ್ಯತ್ಯಾಸವನ್ನು ಈಗ ಬಗೆಹರಿಸಿಕೊಳ್ಳುವ ಸಂಬಂಧವಾಗಿ ಸದರಿ ವಿಚಾರವನ್ನು ದಿನಾಂಕ : 24-11-2020ರಂದು ದಾವಣಗೆರೆ ನೋಟರಿ ಪಬ್ಲಿಕ್ ಇವರ ಬಳಿ ಪ್ರಮಾಣ ಪತ್ರದ ಮುಖೇನ ದೃಢೀಕರಿಸಿಕೊಂಡಿದ್ದು ಇನ್ನು ಮುಂದೆ ನನ್ನ ಹೆಸರನ್ನು "ಜಿ.ಆರ್. ಮಂಜುಳ" ಎಂದು ಮುಂದುವರೆಸಿಕೊಂಡು ಹೋಗಲು ಇಚ್ಛಿಸಿ ಸದರಿ ವಿಚಾರವನ್ನು ಈ ಸಾರ್ವಜನಿಕ ಪ್ರಕಟಣೆ ಮುಖೇನ ಪ್ರಕಟಿಸಲಾಗಿದೆ.

ಸಹಿ/- ಜಿ.ಆರ್. ಮಂಜುಳ


### ಓದುಗರ ಪತ್ರ

#### 'ಧರ್ಮಕ್ಕೆ ರಾಜಕಾರಣದ ಅವಶ್ಯಕತೆ ಇಲ್ಲ' ಲೇಖನ ಕುರಿತು ನನ್ನ ಅನಿಸಿಕೆ

**ಮಾನ್ಯರೇ,** ದಿನಾಂಕ 25.11.2020 ರ ಜನತಾವಾಣಿಯಲ್ಲಿ 'ಧರ್ಮಕ್ಕೆ ರಾಜಕಾರಣದ ಅವಶ್ಯಕತೆ ಇಲ್ಲ' ಎಂಬ ಲೇಖನ ಕುರಿತು ನನ್ನ ಅನಿಸಿಕೆ ಲಿಂಗಾಯತ ಧರ್ಮವು 12 ಶತಮಾನದಿಂದಲೂ ಸ್ವತಂತ್ರ ಧರ್ಮವಾಗಿದೆ, ಇಂದಿನ ಹೋರಾಟ ಕೇವಲ ಆ ಸ್ವತಂತ್ರ ಧರ್ಮಕ್ಕೆ ಸಂವಿಧಾನಿಕ ಮಾನ್ಯತೆಯನ್ನು ಕೊಡಬೇಕೆಂದು ಮಾತ್ರ.

ಲಿಂಗಾಯತ ಧರ್ಮದ ಆರಾಧ್ಯ ಗುರುಗಳು ಬಸವಣ್ಣನವರು ಹಾಗೂ ಅವರೊಂದಿಗಿದ್ದ ಶರಣರು ಲಿಂಗಾಯತ ಧರ್ಮಕ್ಕೆ ಸಂವಿಧಾನಿಕ ಮಾನ್ಯತೆಗಾಗಿ ನಡೆಸುತ್ತಿರುವ ಹೋರಾಟಕ್ಕೆ ಅರ್ಥವಿದೆ, ಕಾರಣ ಇದು ಮಾನವ ಇತಿಹಾಸದಲ್ಲಿ ನಡೆದ ಅಪೂರ್ವ ಕ್ರಾಂತಿ 'ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ, ಮಹಿಳೆಗೆ ಸಮಾನತೆ ನೀಡಿದ, ರಾಜಪ್ರಭುತ್ವದ ಬದಲು ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಿದ ಉಗಮವಾದ ಧರ್ಮವೇ ಲಿಂಗಾಯತ ಧರ್ಮ.

ಕಾರಣ ಇದನ್ನು ಕೆಲವೊಂದು ಜನರ ಅರಿವು ಇಲ್ಲದ ಆಚರಣೆಯನ್ನು ಉದಾಹರಿಸಿ ಅಲ್ಲಗಳೆಯಬಾರದು ಎಂದು ತಮ್ಮಲ್ಲಿ ಬಿನ್ನಹ.

**- ಮಹಾಂತೇಶ ಅಗಡಿ,**
ಬಸವ ಬಳಗ (ರಿ), ಬಸವ ಮಹಾಮನೆ, ದಾವಣಗೆರೆ.
99452 21201





ಜನ್ಮದಿನದ ಹಾರ್ದಿಕ ಶುಭಾಶಯಗಳು




ಎನ್. ಬಸವರಾಜಪ್ಪ
ಬಿಜೆಪಿ ಮುಖಂಡರು

ಮಾಜಿ ಸಚಿವರೂ ಹಾಗೂ ಜನಪ್ರಿಯ ಶಾಸಕರಾದ
ಶ್ರೀ ಎಸ್.ಎ.ರವೀಂದ್ರನಾಥ್
ಅವರು, ಇಂದು 75ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಈ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ ಹುಟ್ಟುಹಬ್ಬದ ಶುಭಾಶಯಗಳು.



ರಾಯಪ್ಪ ಶಂಭುಲಿಂಗಪ್ಪ
ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಶಿರಮಗೊಂಡನಹಳ್ಳಿ.



ಎ.ಎಂ. ಮಂಜುನಾಥ
ಅಧ್ಯಕ್ಷರು, ಬಿಜೆಪಿ ರೈತಮೋರ್ಚಾ, ದಾವಣಗೆರೆ ದಕ್ಷಿಣ
ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಪಿಎಲ್‌ಡಿ ಬ್ಯಾಂಕ್, ದಾವಣಗೆರೆ

ಶ್ರೀ ಡಿ. ಮಂಜುನಾಥ್, ಉಪಾಧ್ಯಕ್ಷರು,
ನಿರ್ದೇಶಕರುಗಳು : ಶ್ರೀ ಎ. ಬಸವರಾಜ್, ಮಾಜಿ ಅಧ್ಯಕ್ಷರು, ಶ್ರೀ ಕೆ. ಮೌನೇಶ್ವರಚಾರ್, ಶ್ರೀ ಕೆ.ಹೆಚ್. ಶಿವಾಜಿ, ಶ್ರೀ ಎಸ್.ಕೆ. ಪ್ರಕಾಶ್, ಶ್ರೀ ಎಸ್.ಎನ್. ಗಿರೀಶ್, ಶ್ರೀ ಕೆ.ಎಸ್. ಹನುಮಂತರಾಜ್, ಶ್ರೀ ಎ.ಪಿ. ಚನ್ನಬಸಪ್ಪ, ಶ್ರೀ ಎ.ಕೆ. ರೇವಣಸಿದ್ದಪ್ಪ, ಶ್ರೀಮತಿ ಬಿ.ಆರ್. ಜಯಮ್ಮ ಸಂತೋಷ್, ಶ್ರೀಮತಿ ಸುಶೀಲಮ್ಮ ರಾಜಣ್ಣ ಆರ್.ಜಿ. ನಾಗರಾಜ್, ಬ್ಯಾಂಕ್ ನಾಮಿನಿ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಶಿರಮಗೊಂಡನಹಳ್ಳಿ.



ಹುಟ್ಟು ಹಬ್ಬದ ಶುಭಾಶಯಗಳು



ಮಾಜಿ ಸಚಿವರೂ ಹಾಗೂ ಜನಪ್ರಿಯ ಶಾಸಕರಾದ
ಶ್ರೀ ಎಸ್.ಎ.ರವೀಂದ್ರನಾಥ್
ಅವರು, ಇಂದು 75ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು,
ಈ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು:




ಎಂ.ಎಸ್. ವಿಠಲ್
ಮಾಜಿ ಮಹಾಪೌರರು,
ದಾವಣಗೆರೆ ನಗರ ಪಾಲಿಕೆ.



ಗಣೇಶ್ ಎಂ.ವಿ.



28ನೇ ವಾರ್ಡ್ ಬಿಜೆಪಿ ಕಾರ್ಯಕರ್ತರು ಹಾಗೂ ಸಮಸ್ತ ನಾಗರಿಕರು
ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಹಾಗೂ ಸಿಬ್ಬಂದಿ ವರ್ಗ ಎನ್.ಆರ್. ರಸ್ತೆ, ದಾವಣಗೆರೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte